**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಹನಿಶ್

ತಂದೆಯ ಹೆಸರು : ಪೈಯಾದ ಅಹಮದ್ ಶೇಖ್

ವಯಸ್ಸು : 33 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಜಾಲಿ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/02/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ಪೊಲೀಸರು ನನಗೆ ವೆಂಕಟಾಪುರ ಶಾಲೆಯ ಹತ್ತಿರ ಸಹಿ ಮಾಡಲು ಹಾಗೂ ಪೊಟೋ ತೆಗೆಯಲು ಕರೆದಿದ್ದರು. ನಾನು ಹಾಗೂ ಚಾಸಾ -3 ರವರು ಸ್ಥಳಕ್ಕೆ ಹೋಗಿರುತ್ತೇವೆ. ಯಾವ ವಿಷಯಕ್ಕೆ ನನ್ನ ಸಹಿ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಮದ್ಯಾಹ್ನದ ಸಮಯಕ್ಕೆ ನನಗೆ ಸಹಿ ಮಾಡಲು ಕರೆದಿದ್ದರು. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.ಸಾಕ್ಷಿಯು ನಿಪಿ-5 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ನಾನು ಪಂಚನಾಗಿ ಭಟ್ಕಳ ನ್ಯಾಯಾಲಯದಲ್ಲಿ ಸುಮಾರು ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತೇನೆ. ಪೊಲೀಸರು ನನಗೆ ಪಂಚನಾಮೆಗೆ ಕರೆಯುತ್ತಾರೆ. ವೆಂಕಟಾಪುರ ಶಾಲೆಯಲ್ಲಿ ನಾನು ಪಂಚನಾಮೆಗೆ ಸಹಿ ಹಾಕಿರಬಹುದು. ಪಂಚನಾೆಮಯನ್ನು ನಾನು ಓದಿಲ್ಲ ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ ಕಾರಣ ನಾನು ಪಂಚನಾಮೆಗೆ ಅವರ ಮುಲಾಜಿಗೆ ಒಳಗಾಗಿ ಸಹಿ ಹಾಕಿರುತ್ತೇನೆ. ಪಂಚನಾಮೆಯಲ್ಲಿ ಸತ್ಯ ಬರೆದಿದ್ದಾರೋ ಅಥವಾ ಸುಳ್ಳು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ಗುನ್ನಾ ಸ್ಥಳವನ್ನು ಚಾಸಾ – 1 ರವರು ತೋರಿಸಿದ್ದರು ಎಂದರೆ ಸರಿಯಲ್ಲ. ಸಹಿಯನ್ನು ದಿಃ 07.001.2022 ರಂದು ಮಧ್ಯಾಹ್ನ ಸ್ಥಳದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಯಾವ ವಿಷಯಕ್ಕೆ ನಾನು ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**